ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

15

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 6/12/2021

## ಮರಿತಿಬ್ಬೇಗೌಡ ಸಿಡಿಮಿಡಿ

**ವಿಧಾನಪರಿಷತ್ತು:** ಜೆಡಿಎಸ್ ಹಿರಿಯ ಸದಸ್ಯ ಮರಿತಿಬ್ಬೇಗೌಡ ಸಿಡಿಮಿಡಿಗೊಂಡ ಪ್ರಸಂಗ ಶುಕ್ರವಾರ ಮತ್ತೇ ಮೇಲ್ಮನೆಯಲ್ಲಿ ನಡೆಯಿತು. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎ.ವೈ. ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಸಚಿವ ಕೆ.ಎಸ್. ಈಶ್ವರಪ್ಪ ಉತ್ತರ ನೀಡುತ್ತಿದ್ದ ವೇಳೆ ಮರಿತಿಬ್ಬೇಗೌಡರು ಮಧ್ಯ ಬಾಯಿ ಹಾಕಿದರು. ಇದಕ್ಕೆ ಆಕ್ರೋಶಗೊಂಡ ನಾರಾಯಣಸ್ವಾಮಿ, ಪ್ರಶ್ನೆ ನನ್ನದು, ನನಗೆ ಉತ್ತರ ಬೇಕಾಗಿದೆ. ನೀವ್ಯಾಕೆ ಮಧ್ಯೆ ಬಾಯಿ ಹಾಕುತ್ತೀರಾ? ಎಂದು ಗದರಿದರು. ಇದರಿಂದ ಸಿಡಿಮಿಡಿಗೊಂಡ ಮರಿತಿಬ್ಬೇಗೌಡ ಸದನದಲ್ಲಿ ಮಾತನಾಡಲು ನನಗೂ ಹಕ್ಕಿದೆ ಎಂದರು. ಈ ವೇಳೆ ಬಿಜೆಪಿ ಸದಸ್ಯರು ಅವರ ಮೇಲೆ ಮುಗಿಬಿದ್ದರು. ಇವರದ್ದು ಯಾವತ್ತೂ ದಬ್ಬಾಳಿಕೆ ವರ್ತನೆ. ಇದನ್ನು ನಾವು ಸಹಿಸುವುದಿಲ್ಲ ಎಂದರು.